ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## ದಿನಾಂಕ: 25–09–2023ರಂದು ನಡೆದ 44ನೇಯ ಹಣಕಾಸು

## ಸಮಿತಿ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 44ನೇಯ ಹಣಕಾಸು ಸಮಿತಿಯ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ:25.09.2023 ರಂದು ಸೋಮವಾರ ಬೆಳಗ್ಗೆ 10.30ಕ್ಕೆ ನಡೆಯಿತು.

**ಈ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು:**

1. ಡಾ. ಎಸ್. ಅಹಲ್ಯ, ಮಾನ್ಯ ಕುಲಪತಿಗಳು, ಕಸಂವಿ — ಅಧ್ಯಕ್ಷರು
2. ಶ್ರೀಮತಿ ಉಮಾ ಕೆ, ಜಂಟೀ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ — ಸದಸ್ಯರು
3. ಡಾ. ಎಸ್. ರೂಪಶ್ರೀ ಕೆ.ಎ.ಎಸ್., ಕುಲಸಚಿವರು, ಕಸಂವಿ — ಸದಸ್ಯರು
4. ಮಹಾಂತಪ್ಪ ಎಸ್. ತುರಕನೂರ, ಉಪ ಕಾರ್ಯದರ್ಶಿ (ಪ್ರ) (ತಾಂತ್ರಿಕ ಶಿಕ್ಷಣ ಹಾಗೂ ಯೋಜನೆ) ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು — ಸದಸ್ಯರು
5. ಪ್ರೊ. ವಿ ಗಿರೀಶ್‌ಚಂದ್ರ, ಡೀನ್, ಕಸಂವಿ — ಸದಸ್ಯರು
6. ವಿದ್ವಾನ್. ಎಸ್. ಕುಮಾರ, ಹಣಕಾಸು ಅಧಿಕಾರಿಗಳು, ಕಸಂವಿ — ಸದಸ್ಯ ಕಾರ್ಯದರ್ಶಿ

ಹಾಜರಿದ್ದ ಸದಸ್ಯರುಗಳನ್ನು ಅಧ್ಯಕ್ಷರ ಅಪ್ಪಣೆಯ ಮೇರೆಗೆ ಸ್ವಾಗತಿಸುತ್ತಾ, ಈ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

| | |
|---|---|
| ವಿಷಯ 1 | 43ನೇಯ ಹಣಕಾಸು ಸಮಿತಿ ಸಭೆಯ ನಡಾವಳಿಯನ್ನು ಸ್ಥಿರೀಕರಿಸುವ ಬಗೆಗೆ. |
| ಟಿಪ್ಪಣಿ | ದಿನಾಂಕ: 09.06.2023ರ ನಡಾವಳಿಯ ವಿಷಯ ಸಂಖ್ಯೆ (06)ರಲ್ಲಿ "ಸಿಸ್ಟಂ ಅನಾಲಿಸ್ಟ್ ಹುದ್ದೆಯನ್ನು ಯು.ಜಿ.ಸಿ ವೇತನ ಶ್ರೇಣಿಗೆ ಪರಿಗಣಿಸುವ ಕುರಿತಂತೆ ಈ ಕೆಳಕಂಡಂತೆ ನಿರ್ಣಯವಾಗಿರುತ್ತದೆ. "ಸಿಸ್ಟಂ ಅನಾಲಿಸ್ಟ್ ಹುದ್ದೆಯು ತಾಂತ್ರಿಕ ಹುದ್ದೆಯಾಗಿರುತ್ತದೆ. ಸದರಿ ಹುದ್ದೆಯು ಯು.ಜಿ.ಸಿ ನಿಯಮಾಳಿಯ ಪ್ರಕಾರ ಬೋಧಕ ಮತ್ತು ಸಂಶೋಧಕ ಹುದ್ದೆಯಾಗದಿರುವುದರಿಂದ ಅವಕಾಶವಿರುವುದಿಲ್ಲ. ವೇತನ ಶ್ರೇಣಿ ಮತ್ತು ಉನ್ನತೀಕರಣಕ್ಕೆ ಸಂಬಂಧಿದಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಅವಗಾಹನೆಗಾಗಿ ಮತ್ತು ಮಾರ್ಗದರ್ಶನಕ್ಕಾಗಿ ಸಲ್ಲಿಸಲು ಒಪ್ಪಿತು." ಸದರಿ ನಿರ್ಣಯವನ್ನು ಹಿಂಪಡೆಯುವ ಕುರಿತು ಸಭೆಯ ಮುಂದೆ ಮಂಡಿಸಿದೆ. ಹಾಗೆಯೇ ಉಳಿದ ಎಲ್ಲಾ ವಿಷಯಗಳ ನಡಾವಳಿಯನ್ನು ಸ್ಥಿರೀಕರಣಕ್ಕಾಗಿ ಮಂಡಿಸಿದೆ. |
| ನಿರ್ಣಯ | 43ನೇಯ ಹಣಕಾಸು ಸಮಿತಿ ಸಭೆಯ ನಡಾವಳಿಯ ವಿಷಯ ಸಂಖ್ಯೆ (06)ರಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಹಿಂಪಡೆಯಿತು. ಹಾಗೆಯೇ ಉಳಿದ ಎಲ್ಲಾ ವಿಷಯಗಳನ್ನು ಒಳಗೊಂಡಂತೆ ನಡಾವಳಿಯನ್ನು ಸ್ಥಿರೀಕರಿಸಿತು. |
| ವಿಷಯ 2 | 43ನೇಯ ಸಭೆಯ ನಡಾವಳಿಯಂತೆ ಕ್ರಮವಹಿಸಲಾಗಿರುವ ಅನುಪಾಲನಾ ವರದಿಯನ್ನು ಅನುಮೋದಿಸುವ ಬಗೆಗೆ. |

| | |
|---|---|
| ಟಿಪ್ಪಣಿ | ದಿನಾಂಕ: 09.06.2023ರ ಸಭೆಯ ನಿರ್ಣಯದಂತೆ ಕ್ರಮವಹಿಸಲಾಗಿದೆ, ಅದರಂತೆ ಅನುಪಾಲನಾ ವರದಿಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು.** |
| **ವಿಷಯ 3** | **2022-23ನೇ ಸಾಲಿನ ವಾರ್ಷಿಕ ಲೆಕ್ಕಪತ್ರವನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತನ್ನ ಹಣಕಾಸಿನ ವಹಿವಾಟನ್ನು Tally ತಂತ್ರಾಂಶದ ಮೂಲಕ ಹಣಕಾಸು ವ್ಯವಹಾರಗಳನ್ನು ಮಾಡುತ್ತಿದೆ. ಹಣಕಾಸಿನ ವ್ಯವಹಾರಗಳನ್ನು ಇ-ಟೆಂಡರ್ ಮೂಲಕ ಆಯ್ಕೆಯಾಗಿರುವ M/S. D.N Joshi & Co. ಇವರಿಂದ ನಿರ್ವಹಿಸಲಾಗುತ್ತಿದೆ. ಸದರಿಯವರು 2022-23ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು (Balance Sheet, Receipts & Payment and Income & Expenditure) ಸಿದ್ದಪಡಿಸಿ ಸಲ್ಲಿಸಿದ್ದಾರೆ. ಸಲ್ಲಿಸಿರುವ ಲೆಕ್ಕಪತ್ರಗಳನ್ನು ಅನುಮೋದನೆಗಾಗಿ ಮಂಡಿಸಿದೆ. ಅನುಮೋದನೆಯ ನಂತರ ಲೆಕ್ಕ ಪರಿಶೋಧನೆಗಾಗಿ ರಾಜ್ಯ ಲೆಕ್ಕ ಪರಿಶೋಧನಾಧಿಕಾರಿಗಳನ್ನು ಆಹ್ವಾನಿಸಲಾಗುತ್ತದೆ. ವಾರ್ಷಿಕ ಲೆಕ್ಕ ಪತ್ರಗಳನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ವಾರ್ಷಿಕ ಲೆಕ್ಕಪತ್ರವನ್ನು ಅನುಮೋದಿಸಿತು. ಹಾಗೆಯೇ ರಾಜ್ಯ ಲೆಕ್ಕ ಪರಿಶೋಧನಾಧಿಕಾರಿಗಳಿಗೆ ಆಡಿಟ್ ನೆರವೇರಿಸುವಂತೆ ಆಹ್ವಾನಿಸಲು ಸೂಚಿಸಿತು.** |
| **ವಿಷಯ 4** | **ಏಪ್ರಿಲ್ 2023 ರಿಂದ ಜುಲೈ 2023ರ ವರೆಗಿನ (04) ತಿಂಗಳ ಜಮಾ-ಖರ್ಚು ತಃಖ್ತೆಯನ್ನು ಅನುಮೋದಿಸುವ ಬಗೆಗೆ.** |
| ಟಿಪ್ಪಣಿ | ಏಪ್ರಿಲ್ 2023 ರಿಂದ ಜುಲೈ 2023ರ ವರೆಗಿನ (04) ತಿಂಗಳ ಜಮಾ-ಖರ್ಚು ತಃಖ್ತೆಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು.** |
| **ವಿಷಯ 5** | **ನ್ಯಾಕ್‌ಗೆ ಸಂಬಂಧಿಸಿದ ಖರ್ಚು- ವೆಚ್ಚಗಳನ್ನು ಅನುಮೋದನೆಗಾಗಿ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ನ್ಯಾಕ್ ಸಿದ್ಧತೆ ಹಾಗೂ ತಂಡವು ಭೇಟಿ ಮಾಡಿದ ನಂತರ ಒಟ್ಟಾರೆ ರೂ.43,52,099/- ಖರ್ಚು- ವೆಚ್ಚಗಳನ್ನು ಮಾಡಿರುತ್ತದೆ. ಅದರ ವಿವರಗಳ ಪಟ್ಟಿಯನ್ನು ಸಲ್ಲಿಸಿದೆ. ಮುಂದುವರೆದು, ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ದಕ್ಷಮಾರ್ಗದರ್ಶನ ಹಾಗೂ ಎಲ್ಲಾ ಬೋಧಕ/ಬೋಧಕೇತರ ಸಿಬ್ಬಂದಿಗಳ ಸಹಕಾರದಿಂದ "A" ಮಾನ್ಯತೆಯನ್ನು ಪಡೆದಿರುತ್ತದೆ. ಈ ಅಂಶಗಳೊಡನೆ ಖರ್ಚು-ವೆಚ್ಚಗಳನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು ಹಾಗೂ ಪ್ರಶಂಸಿಸಿತು.** |
| **ವಿಷಯ 6** | **ಮೇಲುಕೋಟೆಯಿಂದ ಬೆಂಗಳೂರಿಗೆ ಆಗಮಿಸುವ ಹಣಕಾಸು ಅಧಿಕಾರಿಗಳ ಕಾರಿನ ಇಂಧನ ಪಾವತಿಸುವ ಬಗೆಗೆ.** |
| ಟಿಪ್ಪಣಿ | ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನ ಸಂಸತ್, ಮೇಲುಕೋಟೆ ಇಲ್ಲಿನ ಕುಲಸಚಿವರು(ಆಡಳಿತ) ಇವರನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಭಾರ ಹಣಕಾಸು ಅಧಿಕಾರಿಗಳಾಗಿ ಸರ್ಕಾರವು ಅಧಿಕ ಪ್ರಭಾರದಲ್ಲಿರಿಸಿದೆ. ಇವರು ಬೆಂಗಳೂರಿಗೆ ವಿಶ್ವವಿದ್ಯಾಲಯದ ಕೆಲಸ ನಿಮಿತ್ತ ಮೇಲುಕೋಟೆಯ ಕಛೇರಿಯ ವಾಹನದಲ್ಲಿ ಬಂದು ಹೋಗುವ ವಾಹನದ ಇಂಧನ ವೆಚ್ಚ ಹಾಗೂ ಅವರ ಚಾಲಕರ ದಿನಭತ್ಯೆಯನ್ನು ಪಾವತಿಸುವ ಸಂಬಂಧ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಅನುಮೋದಿಸಿತು.** |

| | |
|---|---|
| ವಿಷಯ 7 | ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತಹ ನಿಧಿಗಳನ್ನು ಹೆಚ್ಚಿನ ಬಡ್ಡಿ ನೀಡುವ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿ ಮಾಡುವ ಬಗೆಗೆ. |
| ಟಿಪ್ಪಣಿ | ವಿಶ್ವವಿದ್ಯಾಲಯದ ಆಂತರೀಕ ಮೂಲಗಳಿಂದ ಬರುವಂತಹ ದತ್ತಿನಿಧಿ ಹಾಗೂ ಇನ್ನಿತರ ಠೇವಣಿಗಳನ್ನು ಹೆಚ್ಚಿನ ಬಡ್ಡಿ ನೀಡುವ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ನಿಯಮಾನುಸಾರ ಠೇವಣಿ ಹೂಡುವಂತೆ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನಾ ಸಮಯದಲ್ಲಿ ಆಕ್ಷೇಪಣೆ ಮಾಡಿರುತ್ತಾರೆ ಹಾಗೂ ವರದಿಯಲ್ಲಿ ಉಲ್ಲೇಖಿಸಿರುತ್ತಾರೆ. ಅದರಂತೆ ಮುಂದಿನ ಸೂಕ್ತ ತೀರ್ಮಾನಕ್ಕಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಲೆಕ್ಕ ಪರಿಶೋಧಕರ ಸೂಚನೆಯಂತೆ ನಿಯಮಾನುಸಾರ ಒಂದು ಕೋಟಿ ಮೀರಿದ ಠೇವಣಿಗಳನ್ನು ಹೂಡಲು ಇ-ಟೆಂಡರ್ ಪ್ರಕ್ರಿಯೆಗಳನ್ನು ನಡೆಸಿ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಹೂಡಲು ತೀರ್ಮಾನಿಸಲಾಯಿತು. ಆಂತರೀಕ ಮೂಲದಿಂದ ಮತ್ತು ದತ್ತಿನಿಧಿಯಿಂದ ಬಂದಿರುವ ಸಂಪನ್ಮೂಲವು ಪ್ರಸ್ತುತ ಅವಲೋಕಿಸಿದಾಗ ಒಂದು ಕೋಟಿಗಿಂದ ಕಡಿಮೆಯಿರುವುದನ್ನು ಪರಿಗಣಿಸಿ ಸೂಚನಾ ಪತ್ರ ಹೊರಡಿಸಲಾಗಿರುವುದನ್ನು ಸಹಾ ಸಭೆಯ ಮುಂದೆ ತರಲಾಗಿದ್ದು, ಅದರಂತೆ ಅಧಿಕ ಬಡ್ಡಿ ನಮೂದಿಸಿರುವ ಕೆನರಾ ಬ್ಯಾಂಕ್ ಇಲ್ಲಿ ಠೇವಣಿ ಹೂಡಲು ಹಾಗೂ ಖಾತೆ ತೆರೆಯಲು ಸಭೆಯು ಒಪ್ಪಿತು. |
| ವಿಷಯ 8 | ಸಂಸ್ಕೃತ ಪಾಠಶಾಲೆಯ ಎಸ್‌ಸಿ/ಎಸ್‌ಟಿ ಹಾಗೂ ಸಾಮಾನ್ಯ ಶಿಕ್ಷಕರಿಗೆ ಆಯೋಜಿಸಿದ ಸೇತುಬಂಧ-01 ಪುನಶ್ಚೇತನ ಶಿಬಿರ ಕಾರ್ಯಕ್ರಮದ ಖರ್ಚು-ವೆಚ್ಚವನ್ನು ಸ್ಥಿರೀಕರಿಸುವ ಬಗ್ಗೆ ಹಾಗೂ ಮುಂದಿನ 03 ಸೇತುಬಂಧ ಪುನಶ್ಚೇತನ ಶಿಬಿರ ಕಾರ್ಯಕ್ರಮದ ಖರ್ಚು-ವೆಚ್ಚದ ಅನುಮೋದನೆಗಾಗಿ ಕುರಿತು. |
| ಟಿಪ್ಪಣಿ | ದಿನಾಂಕ:02.08.2023 ರಿಂದ ದಿನಾಂಕ:11.08.2023ರ ವರೆಗೆ ಶ್ರೀ ಸದ್ವಿದ್ಯಾ ಸಂಸ್ಕೃತ ಪಾಠಶಾಲೆ, ಶ್ರೀ ಕುಂಚಿಟಿಗರ ಮಹಾಸಂಸ್ಥಾನ ಮಠ, ತುಮಕೂರು ಇಲ್ಲಿ ನಡೆದ ಸೇತುಬಂಧ-01 ಪುನಶ್ಚೇತನ ಶಿಬಿರ ಕಾರ್ಯಕ್ರಮಕ್ಕಾಗಿ ರೂ.2,40,995/-ಗಳು ವೆಚ್ಚವಾಗಿದ್ದು. ಸ್ಥಿರೀಕರಣಕ್ಕಾಗಿ ಸಭೆಯ ಮುಂದೆ ಮಂಡಿಸಿದೆ.<br>ಮುಂದುವರೆದು, ಕ್ರಿಯಾ ಯೋಜನೆಯಲ್ಲಿ ಉಳಿಕೆ ಇರುವ ಮೊತ್ತ ರೂ. 3,59,045/- ಅನ್ನು ಸೇತುಬಂಧ-02, 03 ಮತ್ತು 04ರ ಪುನಶ್ಚೇತನ ಶಿಬಿರ ಕಾರ್ಯಕ್ರಮವನ್ನು ಆಯೋಜಿಸಲಾಗುವುದು. ಇದರಲ್ಲಿ ಎಸ್‌ಸಿ/ಎಸ್‌ಟಿ ಶಿಕ್ಷಕರ ಖರ್ಚು ವೆಚ್ಚವನ್ನು SCSP/TSP ಅನುದಾನದಿಂದ ಹಾಗೂ ಸಾಮಾನ್ಯ ಶಿಕ್ಷಕರಿಗೆ ಸಾಮಾನ್ಯ ಕ್ರಿಯಾ ಯೋಜನೆಯಿಂದ ಭರಿಸಲಾಗುವುದು. ಈ ಎರಡೂ ಅಂಶಗಳನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಪುನಶ್ಚೇತನ ಶಿಬಿರ ಕಾರ್ಯಕ್ರಮಕ್ಕೆ ಈಗಾಗಲೇ ಖರ್ಚು ಮಾಡಿರುವ ಮೊತ್ತವನ್ನು ಸ್ಥಿರೀಕರಿಸಿತು. ಹಾಗೆಯೇ ಕ್ರಿಯಾ ಯೋಜನೆಯಂತೆ ಉಳಿದಿರುವ ಸೇತುಬಂಧ ಪುನಶ್ಚೇತನ ಶಿಬಿರ (02), (03) ಮತ್ತು (04) ಅನ್ನು ಅನುಷ್ಠಾನ ಗೊಳಿಸಲು ಒಪ್ಪಿತು. |
| ವಿಷಯ 9 | ಸರ್ಕಾರಕ್ಕೆ ಸಲ್ಲಿಸಿರುವ SCSP/TSP ಕ್ರಿಯಾ ಯೋಜನೆಯ ವಿವರಗಳನ್ನು ಘಟನೋತ್ತರ ಅನುಮೋದನೆ ಕೋರುವ ಬಗೆಗೆ. |
| ಟಿಪ್ಪಣಿ | 2023-24ನೇ ಸಾಲಿನ SCSP/TSP ಅನುದಾನ ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ, ಇದರ ಘಟನೋತ್ತರ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | ಸರ್ಕಾರದಿಂದ ಬರುವ ನಿರ್ದೇಶನ/ಆದೇಶದಂತೆ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸಲು ಸಭೆಯು ಒಪ್ಪಿಗೆ ನೀಡಿತು. ಅಲ್ಲಿಯವರೆಗೆ ಈ ಯೋಜನೆಯಲ್ಲಿ ಉಳಿದಿರುವ ಮೊತ್ತವನ್ನು ಎಸ್‌ಬಿಐನಲ್ಲಿ ಸ್ಥಿರ ಠೇವಣಿ ಮಾಡಿದ್ದು, ಅದರಂತೆ ಮುಂದುವರೆಸಲು ಸಭೆಯು ಒಪ್ಪಿತು. |
| ವಿಷಯ 10 | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಬ್ಲಾಕ್ ಗ್ರಾಂಟ್ ಖಾತೆ ಸಂಖ್ಯೆ:64140220134 ಯಲ್ಲಿರುವ ಅನುದಾನದ ಮೊತ್ತವನ್ನು ಠೇವಣಿ ಮಾಡಿರುವುದನ್ನು ಸ್ಥಿರೀಕರಿಸಲು ಹಾಗೂ ಬಳಕೆ ಮಾಡಲು ಅನುಮೋದನೆಗಾಗಿ. |
| ಟಿಪ್ಪಣಿ | ವಿಶ್ವವಿದ್ಯಾಲಯದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಬ್ಲಾಕ್ ಗ್ರಾಂಟ್ ಖಾತೆ ಸಂಖ್ಯೆ:64140220134 ರಲ್ಲಿ 592 ಲಕ್ಷಗಳು ಅನುದಾನ ಲಭ್ಯವಿದ್ದು, ಇದರಲ್ಲಿ 500 ಲಕ್ಷಗಳನ್ನು |

| | |
|---|---|
| | ಲೆಕ್ಕಪರಿಶೋಧಕರ ಮೌಖಿಕ ಸಲಹೆಯ ಮೇರೆಗೆ ಎಸ್.ಬಿ.ಐ ಖಾತೆಯಲ್ಲಿ ಠೇವಣಿ ಇಡಲಾಗಿದೆ. ಉಳಿಕೆ 92 ಲಕ್ಷಗಳು ಬ್ಯಾಂಕಿನ ಎಸ್.ಬಿ ಖಾತೆಯಲ್ಲಿದ್ದು, ಇದನ್ನು ನಿವೃತ್ತರಾದ ಸಂಸ್ಕೃತ ಪಾಠಶಾಲಾ ಶಿಕ್ಷಕರುಗಳಿಗೆ ಗಳಿಕೆ ರಜೆ ನಗದೀಕರಣ ಹಾಗೂ ಬಾಕಿ ಬಿಲ್‌ಗಳನ್ನು ಪಾವತಿಸಲು ನಿರ್ದೇಶನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸರ್ಕಾರದಿಂದ ಬರುವ ನಿರ್ದೇಶನ/ ಆದೇಶದಂತೆ ಕ್ರಮವಹಿಸಲಾಗುವುದು. ಈ ಅಂಶವನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಸ್ಥಿರ ಠೇವಣಿ ಮಾಡಿರುವುದನ್ನು ಸಭೆಯು ಸ್ಥಿರೀಕರಿಸಿತು. ಹಾಗೆಯೇ ಅನುದಾನ ಬಳಕೆಯ ಕುರಿತು ಸರ್ಕಾರದಿಂದ ಬರುವ ನಿರ್ದೇಶನ/ಆದೇಶದಂತೆ ಕ್ರಮವಹಿಸಲು ಸಭೆಯು ಸೂಚಿಸಿತು. ಅಲ್ಲಿಯವರೆಗೆ ಎಸ್‌ಬಿಐನಲ್ಲಿ ಸ್ಥಿರ ಠೇವಣಿ ಮಾಡಿರುವುದನ್ನು ಮುಂದುವರೆಸಲು ಸಭೆಯು ಒಪ್ಪಿತು.<br>2021–22, 2022–23 ಮತ್ತು 2023–24ನೇ ಸಾಲಿನಲ್ಲಿ ನಿವೃತ್ತರಾದ ಮತ್ತು ನಿವೃತ್ತರಾಗಲಿರುವ ಶಿಕ್ಷಕರ ಗಳಿಕೆ ರಜೆಯ ನಗದೀಕರಣ ಮತ್ತು ಇತರೆ ಬಾಕಿ ವೇತನಗಳ ವಿವರಗಳನ್ನು ತ್ವರಿತವಾಗಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯಕ್ಕೆ ಸೂಚಿಸಿತು. ಹಾಗೆಯೇ ಬರುವ 2024–25ನೇ ಸಾಲಿಗೆ ಈ ತಿಂಗಳ ನವೆಂಬರ್‌ನಲ್ಲಿ ಸರ್ಕಾರಕ್ಕೆ ಸಲ್ಲಿಸುವ ಬಜೆಟ್‌ನಲ್ಲಿ ಗಳಿಕೆ ರಜೆಯ ನಗದೀಕರಣ ಮತ್ತು ಇತರೆ ಬಾಕಿ ವೇತನಗಳಿಗೆ ಉಪ ಲೆಕ್ಕಶೀರ್ಷಿಕೆ 251 ರ ಅಡಿಯಲ್ಲಿ ಒದಗಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲೂ ಸಹ ಸಭೆಯು ಸೂಚಿಸಿತು.** |

| | |
|---|---|
| | **ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿತವಾದ ಇತರ ವಿಷಯಗಳು** |
| **ವಿಷಯ 01** | **ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಪ್ರವೇಶ ಶುಲ್ಕವನ್ನು ನಿಗಧಿಪಡಿಸಲು ಅನುಮೋದನೆಗಾಗಿ ಮಂಡಿಸಿದೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ನಡೆಸುವ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಪ್ರವೇಶ ಶುಲ್ಕ ರೂ. 1,000/–ಗಳನ್ನು ನಿಗಧಿಪಡಿಸಲು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಚರ್ಚಿಸಿದ ನಂತರ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಪ್ರವೇಶ ಶುಲ್ಕ ರೂ. 1,000/–ಗಳನ್ನು ಅಳವಡಿಸಲು ಒಪ್ಪಿತು. ಸಮಯಕ್ಕೆ ಅನುಗುಣವಾಗಿ ಮುಂದೆ ಬರುವ ಕೋರ್ಸ್‌ಗಳಿಗೆ ಹಾಗೂ ಸನ್ನಿವೇಶಗಳಿಗೆ ತಕ್ಕಂತೆ ಆಧ್ಯತೆ ಮತ್ತು ಅಗತ್ಯತೆಗೆ ಅನುಗುಣವಾಗಿ ಶುಲ್ಕವನ್ನು ಪರಿಷ್ಕರಿಸಲು ಸಹ ಒಪ್ಪಿತು.** |
| **ವಿಷಯ 02** | **ಎಂಎಸ್‌ಸಿ ಯೋಗ ಚಿಕಿತ್ಸೆ ಹಾಗೂ ಸಮಾಲೋಚನೆ ಮತ್ತು ಎಂಎಸ್‌ಸಿ ಯೋಗ ಶಾಸ್ತ್ರ ಪ್ರವೇಶಾತಿಗೆ ಏಕ ರೂಪ ಶುಲ್ಕ ನಿಗಧಿಪಡಿಸುವ ಬಗ್ಗೆ.** |
| **ಟಿಪ್ಪಣಿ** | ದಿನಾಂಕ: 21.09.2023 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಎಂಎಸ್‌ಸಿ ಯೋಗ ಚಿಕಿತ್ಸೆ ಹಾಗೂ ಸಮಾಲೋಚನೆ ಮತ್ತು ಎಂಎಸ್‌ಸಿ ಯೋಗ ಶಾಸ್ತ್ರ ಕೋರ್ಸ್‌ಗಳಿಗೆ ಏಕ ರೂಪ ಶುಲ್ಕವಾಗಿ 17,700/– ರೂಗಳನ್ನು (ಪ್ರವೇಶ ಶುಲ್ಕ 17,500/– ಮತ್ತು ಅರ್ಜಿ ಶುಲ್ಕ 200/–) ನಿಗಧಿಪಡಿಸಲು ನಿರ್ಣಯವಾಗಿದೆ. ಅದರಂತೆ ಏಕ ರೂಪ ಶುಲ್ಕ ನಿಗಧಿ ಮಾಡುವ ವಿಷಯದಲ್ಲಿ ಸಭೆಯ ಮುಂದೆ ಮಂಡಿಸಿದೆ. |
| ನಿರ್ಣಯ | **ಚರ್ಚಿಸಿದ ನಂತರ ಏಕ ರೂಪದ ಶುಲ್ಕ 17,700/–ಗಳನ್ನು ನಿಗಧಿಪಡಿಸಲು ಸಭೆಯು ಒಪ್ಪಿತು.** |

ಮೇಲ್ಕಂಡ ವಿಷಯಗಳನ್ನು ಹೊರತು ಪಡಿಸಿ ಇತರೆ ವಿಷಯಗಳು ಚರ್ಚೆಗೆ ಬಾರದ ಕಾರಣ ಮಾನ್ಯ ಅಧ್ಯಕ್ಷರ ಅಪ್ಪಣೆಯೊಂದಿಗೆ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೂ ವಂದಿಸಿ ಸಭೆಯು ಮುಕ್ತಾಯಗೊಂಡಿತು.

25/9/23

(ಎಸ್. ಕುಮಾರ)
**ಹಣಕಾಸು ಅಧಿಕಾರಿಗಳು**
ಸದಸ್ಯ ಕಾರ್ಯದರ್ಶಿ

(ಡಾ. ಎಸ್. ಅಹಲ್ಯ)
**ಕುಲಪತಿಗಳು**
ಅಧ್ಯಕ್ಷರು

**ದಿನಾಂಕ: 25.09.2023.**